ಶ್ರೀ ಎಚ್ ಎನ್. ಸಿದ್ದಪ್ಪ.—ಹೊಸದಾಗಿ ಸಾಲಗಳನ್ನು ಕೊಡಿಸುತ್ತೇವೆಂದು ಜನರಿಂದ ಶೇಕಡ 20-30 ಪರ್ಸೆಂಟ್ ಹಣವನ್ನು ಹೊಸದಾಗಿ ಷೇರ್ ರೂಪದಲ್ಲಿ ವಸೂಲ್ಮಾಡಿ ಅವನ್ನು ಈಗ ಶೇಕಡ 40 ರಷ್ಟು ಹಣವನ್ನು ರಿಪೇರಿ ಮಾಡುವುದಕ್ಕೆ ವಿನಿಯೋಗ ಮಾಡಿಕೊಂಡಿದ್ದಾರೆ. ಅಂಥವರಿಗೆ ಈಗ ಹೊಸದಾಗಿ ಸಾಲ ಸಿಕ್ಕುವುದಿಲ್ಲ ಎಂದರೆ ಅವರು ಷೇರ್ ರೂಪದಲ್ಲಿ ಕೊಟ್ಟಿರತಕ್ಕ ಹಣದ ಗತಿಯೇನಾಗಬೇಕು ?

ಶ್ರೀ ಎ. ಶಂಕರ ಆಳ್ವ.—ಹೊಸ ಅರ್ಜಿಗಳಿಗೆ ಈಗ ಸಾಲ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಇಲ್ಲಿಯತನಕ ಕೊಟ್ಟಿರತಕ್ಕ ಹಣ ಸದ್ವಿನಿಯೋಗವಾಗಿದೆ, ಆದರಿಂದ ಉದ್ದೇಶ ಸಾಧನೆಯಾಗಿದೆ ಎನ್ನುತ್ತಿರುವಾಗ ಸರ್ಕಾರದವರು ರಿಕವರಿಯಾಗಬೇಕಾಗಿರತಕ್ಕ ಹಣವನ್ನು ರೈಟಾಫ್ ಮಾಡಿ ಆದಕ್ಕೆ ಪ್ರತ್ಯೇಕ ಹಣವನ್ನು ಒದಗಿಸಿ ಅವರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲವೇ ?

Sri A. SHANKARA ALVA.—That is a suggestion for action. We will consider.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇಲ್ಲಿ ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ಈ ವಿಚಾರದಲ್ಲಿ ಸರ್ಕಾರದವರ ಜವಾಬ್ದಾರಿಯೇ ಇಲ್ಲದಂತೆ ಕಾಣುತ್ತಿದೆ. ಹಳೇ ಸರ್ಕಾರಗಳಿದ್ದ ಕಾಲಕ್ಕೆ ರಾಜ್ಯದ ಬಜೆಟಿನಲ್ಲೇ ಈ ಹರಿಜನ ಗಿರಿಜನರಿಗಾಗಿ 25 ಲಕ್ಷ ರೂಪಾಯಿಗಳನ್ನು ಈ ಬಾಬಿಗಾಗಿ ಒದಗಿಸುತ್ತಿದ್ದರು. ಇತ್ತೀಚೆಗೆ ರಾಜ್ಯ ವಿಭಾಜನೆಯಾದ ನಂತರ ಬೊಂಬಾಯಿ ಪ್ರಾಂತ್ಯದ ರೂಲ್ಸ್‌ನ್ನು ಅನುಸರಿಸಿ ಇದನ್ನು ಜಾರಿಗೆ ತಂದರು. ಎಲ್.ಐ.ಸಿ. ಅವರು ಕೊಟ್ಟ ಹಣ ವಸೂಲಾಗಲಿಲ್ಲ ಎಂಬ ನೆಪದಿಂದ ಹೊಸದಾಗಿ ಅರ್ಜಿ ಹಾಕಿಕೊಂಡವರಿಗೆ ಸಾಲಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ ಕೂಡಲೆ ರಾಜ್ಯ ಸರ್ಕಾರದ ಬಜೆಟ್ಟಿನಲ್ಲಿ ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನಾದರೂ ಒದಗಿಸುತ್ತಾರೆಯೇ ?

ಶ್ರೀ ಎ. ಶಂಕರ ಆಳ್ವ.—ಈ ಸ್ಕೀಮು 1965 ರಲ್ಲಿ ಸ್ಥಾಪಿತವಾಯಿತು. ಆಗ ಅವರು ಹಣ ಕೊಡುವುದಕ್ಕೆ ಮೊದಲು ಮಾಡಿದರು. ಯಾವಾಗ ಕೊಟ್ಟ ಹಣ ಹಿಂದಕ್ಕೆ ಬರುವುದು ಕಡಮೆ ಆಯಿತೋ ಆಗ ಅವರು ಮುಂದಕ್ಕೆ ಕೊಡುವುದನ್ನು ಖೈದು ಮಾಡಿದರು ; ಕೊಡುವುದಕ್ಕೆ ಕಬೂಲು ಮಾಡಲಲ್ಲ.

INDUSTRIAL ESTATE AT DAVANGERE

240. Smt. C. NAGAMMA KESHAVAMURTHY (Davangere).—Will the Minister for Industries be pleased to state:—

(a) whether there is any proposal before Government to start an Industrial Estate at Devangere ;

(b) if so, Whether it would be taken up during the current year ?

Sri S. M. KRISHNA.—(Minister for Industries).—

(a) Yes, during the fifth Plan period.

(b) No.

Smt. C. NAGAMMA KESHAVAMURTHY.—How many small-scale industries are situated in and arround Davanagere ?

† Sri S. M. KRISHNA.—I am afraid that does not arise out of this Question. This question relates only to the Industrial Estate. So I have got information with reference to the Indistrial Estate.

Sri C. NAGAMMA KESHAVAMURTHY.—In view of the policy of the Government to encourage the public to start small-scale industries and also improve the existing ones, what are the facilities that Government has provided for the small-scale industrialists in Davanagere ?

Sri S. M. KRISHNA.—We provide them with all the raw materials that are needed for setting up of industry; we provide them with power; we provide them with land. In a nutshell, it is the intention of the Government to provide the infrastructure facilities to setting up of industries.

Smt. C. NAGAMMA KESHAVAMURTHY.—I want some details regarding the raw material depot and the common fucility Centre at Harihar What steps have been taken to introduce improvments in this matter ?

Sri S. M. KRISHNA.—It is under the consideration of the Government.

ಶ್ರೀ ಬಿ. ಭೈರಪ್ಪಾಜಿ.—ಪ್ರತಿಯೊಂದು ತಾಲ್ಲೂಕಿನಲ್ಲೂ ಇದೇ ರೀತಿ ಅಲ್ಲಲ್ಲಿ ದೊರೆಯತಕ್ಕ ರಾಮೋಚ್ರೆರಿಯುಲ್ಸಿಗೆ ತಕ್ಕಂಥಿ ಕೈಗಾರಿಕೆಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ?

ಅಧ್ಯಕ್ಷರು.—ಆ ಉಪ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

STAFF OF TAKEN OVER HIGH SCHOOL OF D. L. B.

244 Smt. C. NAGAMMA KESHAVAMURTHY (Davangere).—Will the Minister for Education be pleased to state :—

(*a*) whether the Government is treating all the employees of the taken-over local body high schools as regular Government servants ;

(*b*) if so, the opportunities provided regarding their promotions and transfers to Government institutions ?

Sri A. R. BADARINARAYANA (Minister of Education).—

(*a*) No.

(b) The Director of public Instruction has been permitted to fill up the vacancies by transfer or by making in-charge arrangements in respect of Class—III staff only, under Rule 32 of Mysore Civil Services Rules, temporarily pending finalisation of the Gradation List.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ಸರ್ಕಾರದವರು ಈ ಮುನಿಸಿಪಲ್ ಮತ್ತು ತಾಲ್ಲೂಕ್ ಬೋರ್ಡ್ ಹೈಸ್ಕೂಲುಗಳನ್ನು ತಾವು ಸಂಪೂರ್ಣವಾಗಿ ವಹಿಸಿಕೊಂಡನಂತರ ಅಲ್ಲಿ ಕೆಲಸ ಮಾತಕ್ಕಡ ನೌಕರರನ್ನು, ಅವರು ಸರ್ಕಾರಿ ನೌಕರರಲ್ಲ ಎಂದರೆ ಅದು ಸರಿಯಾದ ಉತ್ತರವೇ ?